ಶಕ್ತಿ ಜೈವಿಕವಾಗಿಯೇ ಬರುತ್ತದೊ? ಈ ಎರಡನ್ನೂ ಬೇರೆ ಮಾಡಿ ನೋಡುವುದೇ ತಪ್ಪಿರಬಹುದು.

ವಿನಯ ಅವರ ಕವಿತೆ ಮುಖ್ಯವಾದ ಪ್ರಶ್ನೆಯೊಂದನ್ನು ಎತ್ತುತ್ತದೆ. ಆಧುನಿಕತೆ, ಶಿಕ್ಷಣ ಹೆಣ್ಣನ್ನು ಶಕ್ತಳನ್ನಾಗಿಸಿದೆಯೊ? ಇನ್ನೂ ದುರ್ಬಲಳನ್ನಾಗಿಸಿದೆಯೊ? ಆಯ್ಕೆಯ ದ್ವಂದ್ವ, ಬೇಕೆನಿಸಿದ್ದನ್ನು ಪಡೆದುಕೊಳ್ಳುವ ಧೀಶಕ್ತಿ, ಈ ಎಲ್ಲದರ ಅರಿವಿದ್ದೂ ರಾಜಿಗೆ ಜಾರುವ ಅನಿವಾರ್ಯತೆ ತಾನೇ ಸೃಷ್ಟಿಸಿಕೊಂಡದ್ದು ಎನ್ನುವ ಸತ್ಯ ಮನಸ್ಸಿಗೆ, ಬುದ್ಧಿಗೆ ರಾಚಿದಾಗಲೂ ಅವಳು–

ನೆನಪುಗಳ ಈರುಳ್ಳಿ ಹೆಚ್ಚುತ್ತಾಳೆ
ಭಾವನೆಗಳ ಒತ್ತೆಯಿಟ್ಟು
ಬದುಕ ಕೊಂಡದ್ದಕ್ಕೆ
ಅವಳು
ಕಂಪಿಸುವ ತುಟಿಗಳ ಮಧ್ಯೆ
ಮಾತ ಹೂತಿಟ್ಟು
ಮೌನದ ಪಹರೆ ಕಾಯುತ್ತಾಳೆ

ಆತ್ಮಮರುಕದಂತೇನೂ ಈ ಮಾತುಗಳು ಕೇಳಿಸುವುದಿಲ್ಲ, ಆದರೆ ಆ ವಿಷಾದವೇ ಎದೆಯಿರಿಯುತ್ತದೆ.

ಚಿದಾನಂದ ಸಾಲಿಯವರ 'ನಾನೆಂಬ ಪರಕೀಯಳು' ಗಂಡು ಹೆಣ್ಣನ್ನು ಅವಾಹಿಸಿಕೊಂಡ, ಒಳಗೊಂಡ ಒಳ್ಳೆಯ ಕವಿತೆ. ಮತ್ತದೇ ಸವಾಲು, ಬಗೆಹರಿಯದ ಪ್ರಶ್ನೆ.

ಬೆಳಿಗ್ಗೆ ಇವರ ತೆಕ್ಕೆಯಿಂದ ಬಲವಂತವಾಗಿ
ಬಿಡಿಸಿಕೊಂಡೇಳುವಾಗ
ಬಂಡೆಗಲ್ಲುಗಳ ಹಿಂದೆ ನೀ ನುಡಿಸಿದ ಆ ರಾಗದ
ನೆನಪು...
ತಮ್ಮದಲ್ಲದ ಬದುಕನ್ನು ಬದುಕಿ ಬದುಕಿ ಸತ್ತ ಸತ್ತ
ಹೆಣ್ಣುಗಳ ಲೆಕ್ಕಕ್ಕೆ ಕೊನೆಯೆನ್ನುವುದು ಇರುವುದು
ಸಾಧ್ಯವೇ?

ಆರೀಫ್ ರಾಜಾ, ಅರುಣ್ ಜೋಳದ ಕೂಡ್ಲಿಗಿ, ಅಕ್ಷತಾ, ಅನುಪಮಾ, ನೀಲಾ, ಸುಜಾತಾ, ರೂಪಶ್ರೀ ಕಲ್ಲಿಗನೂರ ಇವರ ಕವಿತೆಗಳು ಗಮನಾರ್ಹವಾಗಿವೆ. ಲೇಖನ ಬಲು ಉದ್ದವಾದೀತೆಂಬ ಕಾರಣಕ್ಕೆ ಅವರ ಕವಿತೆಗಳನ್ನು ಇಲ್ಲಿ ಚರ್ಚಿಸುತ್ತಿಲ್ಲ.

ಈ ಬಗೆಯ ಸಂಕಲನಗಳ ಪ್ರಸ್ತುತತೆ ಮತ್ತು ಮಹತ್ವದ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕು. ಹೆಣ್ಣನ್ನು ಕುರಿತ ಎಲ್ಲ ಬಗೆಯ ಮಾದರಿಗಳಿಗೂ ಸಾಹಿತ್ಯಕ ಮತ್ತು ಸಾಹಿತ್ಯೇತರ ಆಯಾಮಗಳು ಇರುತ್ತವೆ. ಸ್ತ್ರೀ ಸಂಕಥನದ ಆಗೋಚರ ಪರಂಪರೆಯನ್ನು ಗೋಚರತೆಯ ಮುನ್ನೆಲೆಗೆ ತರಲು ಏನೆಲ್ಲ ಪ್ರಯತ್ನಗಳೂ ನಡೆಯುತ್ತಿರುವ ಕಾಲಘಟ್ಟ ಇದು. ಹೆಣ್ಣಿನ ವಿಷಯಗಳನ್ನು ಅದರ ಸಂಕೀರ್ಣತೆಯಿಂದ ನಿಧ ನಿಧಾನವಾಗಿಯಾದರೂ ಸ್ಪಷ್ಟ ಸತ್ಯಗಳಲ್ಲಿ ನಿಖರ ಪ್ರಮೇಯಗಳಲ್ಲಿ ಮಂಡಿಸಲು ಇಂಥ ಸಂಕಲನಗಳು ತೀರ ಅಗತ್ಯ. ಸ್ತ್ರೀ ಸಂಕಥನವನ್ನು ಸಾಮಾಜಿಕ ಸಂಸ್ಥೆಗಳ, ರಾಜಕೀಯ ಸಂಸ್ಥೆಗಳ ಪೂರಕ ಬೆಂಬಲವಿಲ್ಲದೆ ಕಟ್ಟುವುದಕ್ಕೂ ಇವು ನೆರವಾಗುತ್ತವೆ. ಕುಟುಂಬ, ದಾಂಪತ್ಯ, ಗಂಡಿನ ಅಕಾರಣ ಸವಲತ್ತುಗಳು, ಇದರಿಂದ ಗಂಡಿಗೆ ಪ್ರಾಪ್ತವಾಗುವ ಅನಂತ ಅಧಿಕಾರದ ನೆಲೆಗಳು, ಹೆಣ್ಣನ್ನು ಒಳಗಿನಿಂದಲೂ ಹೊರಗಿನಿಂದಲೂ ಕಟ್ಟುವ, ಕಟ್ಟಿ ಹಾಕುವ ಅಮೃತದ ರೂಪದಲ್ಲೂ ಹೆಸರಿನಲ್ಲೂ ಇರುವ ನಿರ್ದೇಶಕ ತತ್ವಗಳು – ಈ ಎಲ್ಲವನ್ನು ಕಾವ್ಯದ ರೂಪಕಗಳಲ್ಲಿ ಮಾತ್ರವಲ್ಲ, ಸಾಂಸ್ಥಿಕ ವಿವರಗಳ ಜೊತೆ ಹೊಂದಿಸಿ ತಾಳೆ ನೋಡುವ ಶೈಕ್ಷಣಿಕ ಅಧ್ಯಯನಕ್ಕೂ ಇವು ನೆರವಾಗುತ್ತವೆ. ಹೆಣ್ಣಿನ ಹೋರಾಟವನ್ನು ಬಲಗೊಳಿಸುವ ಸಂಪರ್ಕ ತಂತುಗಳಾಗಿಯೂ ಇವುಗಳನ್ನು ನೋಡಬೇಕು. ಇಂಥ ಸಂಕಲನದಲ್ಲಿರುವ ಗಂಡಿನ ಬಗೆಗೂ ನಮ್ಮ ನೋಟ–ನಿಲುವುಗಳು ಬದಲಾಗುತ್ತಾ ಹೋಗುತ್ತವೆ.

ಇಂಥ ಮಹತ್ವದ ಸಂಕಲನವನ್ನು ಉಷಾ ಅವರು ಪ್ರೀತಿ, ಆಸ್ಥೆ, ಜವಾಬ್ದಾರಿ ಎಲ್ಲವೂ ಒಟ್ಟಾಗಿ ರೂಪಿಸಿದ್ದಾರೆ. ಕವನಗಳ ಆಯ್ಕೆಯ ಬಗ್ಗೆ ನಮಗೆ ಪ್ರಶ್ನೆಗಳಿರಬಹುದು. ಆದರೆ, ಒಂದು ಸಂಕಲನವಾಗಿ ಇದು ತನ್ನ ಉದ್ದೇಶವನ್ನು ಈಡೇರಿಸಿದೆ ಎನ್ನುವುದರಲ್ಲಿ ಯಾರಿಗೂ ಅನುಮಾನಗಳಿರದಷ್ಟು ಎಚ್ಚರಿಕೆಯಿಂದ ಉಷಾ ಈ ಸಂಕನಲವನ್ನು ಸಂಪಾದಿಸಿದ್ದಾರೆ. ಸ್ತ್ರೀ ಸಂಕಥನದ ಹೆಣಿಗೆಗೆ ಇದು ಕೈ ಜೋಡಿಸಿದೆ, ಬಲಪಡಿಸಿದೆ. ●